ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಕೊಟ್ಟರೆ ನಮ್ಮ ಆಭ್ಯಂತರವಿಲ್ಲ. ಅನೇಕ ಕಡೆ ಇಂಥ ಬೇಡಿಕೆ ಬಂದಿದೆ. ಇಂಥ ಸಂದರ್ಭದಲ್ಲಿ ಹೆಚ್ಚು ಸಹಾಯ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಏತಕ್ಕೆಂದರೆ ಪರಿಹಾರ ಕೊಡುವಾಗ ಅವರಿಂದ ಧನ ಸಹಾಯವೂ ಬೇಕಾಗುತ್ತದೆ. ಸಾಕಷ್ಟು ಅನುಕೂಲವಾಗುವಂಥ ರೀತಿಯಲ್ಲಿ ಸಹಾಯ ಮಾಡೋಣವೆಂದು ಮಾಡುತ್ತಿದ್ದೇವೆ. ರೈತರು ಬೆಳೆದಂಥ ಬೆಳೆ, ಭೂಮಿ ಕೊಚ್ಚಿ ಹೋಗಿದ್ದರೆ ಅಲ್ಲಿ ಯಾವರೀತಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ಸಾಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್ ನವರನ್ನು ಕೇಳಿ ಅವರಿಗೆ ಯಾವರೀತಿ ಸಹಾಯ ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ, ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ, ಡಿ.ಪಿ.ಎ.ಪಿ. ಇವುಗಳ ಮುಖಾಂತರವೂ ಕೂಡ ಸಹಾಯ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಯಂ. ಭೂಪತಿ.—ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಒತ್ತಾಯ ಮಾಡುತ್ತಿದ್ದೇನೆಂದರೆ ಬಳ್ಳಾರಿ ಜಿಲ್ಲೆ ಪ್ರತಿ ವರ್ಷ ಪ್ರಕೃತಿಯ ವಿಕೋಪಕ್ಕೆ ತುತ್ತಾಗುತ್ತಲೇ ಇರುತ್ತದೆ. ೧೯೫೫ನೇ ಇಸವಿಯಲ್ಲಿ ಭಾರೀ ಮಳೆ ಬಂದ ಕಾರಣದಿಂದಾಗಿ ೧೯ ಜನರು ಕೊಟ್ಟಿ ಹೋಗಿ ಸ್ಪಾಟ್ ಡೆತ್ ಆಗಿದೆ. ೧೯ ಜನರ ಒಂದೊಂದು ಕುಟುಂಬಕ್ಕೆ ಸರ್ಕಾರ ಪರಿಹಾರ ಧನವೆಂದು ಐದು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಬೇರೆ ಏನೂ ಸಹಾಯವನ್ನು ಕೊಟ್ಟಿಲ್ಲ. ಇಷ್ಟಿಗೆ ಜನತಾ ಮನೆಗಳನ್ನು ಸಹ ಕೊಟ್ಟಿಲ್ಲ. ಪರಿಹಾರವನ್ನು ಕೊಡಲು ಕೇಂದ್ರ ಸರ್ಕಾರದ ಮೇಲೆ ಹೇಳಿದರೆ ಹೇಗೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಎಲ್ಲಿ ಭಾರಿ ನಷ್ಟಕ್ಕೆ ರೈತರು ಒಳಗಾಗಿರುತ್ತಾರೆ ಅಂಥ ಕಡೆ ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನಾದರೂ ಮನ್ನಾ ಮಾಡುತ್ತೀರಾ ಎಂದು ಕೇಳುತ್ತೇನೆ ಇಷ್ಟೆಂದು ಕೊಂದರೆಗೆ ಈಡಾಗಿರತಕ್ಕಂಥ ರೈತರನ್ನು ಸಾಲ ಕಟ್ಟಬೇಕೆಂದು ಕೇಳಿದರೆ ಅವರು ಯಾವ ರೀತಿ ಸಾಲ ಕಟ್ಟಲು ಸಾಧ್ಯವಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಹುಣಸೂರಿನಲ್ಲಿ ಮಳೆಯ ಪರಿಣಾಮವಾಗಿ ಒಂದು ಬಸ್ ಕೊಚ್ಚಿಹೋಯಿತು. ನಾನು ಹೇಳುವುದು ಪರಿಹಾರವನ್ನು ಕೊಡಬಾರದೆಂದು ಹೇಳುತ್ತಿಲ್ಲ, ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದೀರಿ. ಪರಿಶೀಲನೆ ಮಾಡುತ್ತೇನೆ.

ದಿದನ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ

೯೧೨. ಶ್ರೀ ಜಿ. ಎಸ್. ಶಿವನಂಜಪ್ಪ (ಹಟ್ಟಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ ಕೊಡಲು ನಿಗದಿಪಡಿಸಲು ತೀರ್ಮಾನಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ವೇತನ ಕೊಟ್ಟಿರುವುದಿಲ್ಲ ಹಾಗೂ ಯಾವಾಗ ವೇತನವನ್ನು ಪಾವತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು) —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಮಹಿಳಾ ಮಂಡಲಿಗಳ ಬಗ್ಗೆ

೧೩೯. (ಸಿ) ಶ್ರೀಮತಿ. ಮನೋರಮಾ ಮಂದ್ವಗಾಜ್ (ಉಡುಪಿ).—ಮಾನ್ಯ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಮಹಿಳಾ ಮಂಡಳಗಳ ಒಟ್ಟು ಸಂಖ್ಯೆ ಎಷ್ಟು ? (ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳ ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು ?

ಆ) ೧೯೮೮-೮೯ನೇ ಸಾಲಿಗೆ ಗ್ರಾಮಾಂತರ ಪ್ರದೇಶದಲ್ಲಿ ಮಹಿಳಾ ಮಂಡಳಿಗಳನ್ನು ಪ್ರಾರಂಭಿಸಲು ಸರ್ಕಾರ ಯಾವುದಾದರೂ ಯೋಜನೆಗಳನ್ನು ಮಾಡಿದೆಯೇ ?

(ಜಿಲ್ಲಾವಾರು ಮಾಹಿತಿ ಒದಗಿಸಿ)

ಇ) ಮಹಿಳಾ ಮಂಡಳಿಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯಿನಿಯರ ವೇತನ ವಿವರಗಳೇನು

ಈ) ಅವರ ವೇತನವನ್ನು ಸರ್ಕಾರ ಪರಿಷ್ಕರಿಸಲು ಉದ್ದೇಶಿಸಿದೆಯೇ ?

ಶ್ರೀಮತಿ. ಶಿವಕಾಂತ ಚತುರೆ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ೯೫೫೪

ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಲಾಗಿದೆ.

ಆ) ಈ ರೀತಿಯ ಯೋಜನೇ ಯಾವುದೂ ಇರುವುದಿಲ್ಲ. ಕೇಂದ್ರ ಐಸಿಡಿಎಸ್ ಪ್ರಾಜೆಕ್ಟ್ ಯೋಜನೆಯಡಿಯಲ್ಲಿ ೧,೦೦೦-೦೦ ರೂ.ಗಳ ಅಡಹಾಕ್ ಗ್ರಾಂಟ್‌ನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ಆಂಗನವಾಡಿ ಇರುವ ಕಡೆಗಳಲ್ಲಿ ಮಹಿಳಾ ಮಂಡಳಗಳನ್ನು ಪ್ರಾರಂಭಿಸಲು ಕೊಡಲಾಗುವುದು.

ರಾಜ್ಯ ಐಸಿಡಿಎಸ್ ಯೋಜನೆಯಡಿಯಲ್ಲಿ ಬರುವ ಮಹಿಳಾ ಮಂಡಳಿಗೂ ಸಹಾಯಧನವನ್ನು ಮಂಜೂರು ಮಾಡುವುದನ್ನು ಪರಿಶೀಲಿಸಲಾಗುತ್ತೆ.

ಇದು ಗ್ರಾಂಟ್ ಇನ್ ಎಡ್ ಯೋಜನೆಯಾಗಿದ್ದು ಯಾವುದೇ ಯೋಜಿತ ಗುರಿಯನ್ನು ನಿಗದಿಪಡಿಸಿಲ್ಲ.

ಇ) ಮಹಿಳಾ ಮಂಡಳಿಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಸರ್ಕಾರವು ನಿಗದಿಯಾದ ವೇತನ ಶ್ರೇಣಿಯನ್ನು ಮಂಜೂರು ಮಾಡಿರುವುದಿಲ್ಲ. ಆದರೆ, ಈ ಕೆಳಕಂಡತೆ ಗೌರವಧನ ನೀಡುತ್ತಿರುವ ನೊಂದಣಿಯಾದ ಮಹಿಳಾ ಮಂಡಳಿಗಳಿಗೆ ವರ್ಷಕ್ಕೆ ಒಂದು ಸಾವಿರ ರೂ.ಗಳ ನಿರ್ವಹಣಾ ಸಹಾಯಧನ ಕೊಡಲಾಗುತ್ತೆ. ಈ ಸಹಾಯಧನ ೫ ವರ್ಷಗಳವರೆಗೆ ಮಾತ್ರ ಲಭ್ಯವಿರುತ್ತೆ.

೧. ಎಸ್‌ಎಸ್‌ಎಲ್‌ಸಿ ಪಾಸ್ ಆಗಿರುವ ದಿನ ಒಂದಕ್ಕೆ ೫ ಗಂಟೆ ಹಾಗೂ ಅದಕ್ಕಿಂತ ಹೆಚ್ಚು ವೇಳೆ ತರಗತಿ ನಡೆಸಿದರೆ ತಿಂಗಳಿಗೆ ೮೦-೦೦ ರೂ.ಗಳು.

೨. ಎಸ್‌ಎಸ್‌ಎಲ್‌ಸಿ ಪಾಸ್‌ಆಗಿರುವ ೫ ಗಂಟೆಗೂ ಕಡಿಮೆ ವೇಳೆ ತರಗತಿ ನಡೆಸಿದರೆ ತಿಂಗಳಿಗೆ ೩೦-೦೦ ರೂ.ಗಳು.

೩. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ದರ್ಜೆ ಇರುವ ಉಪಾಧ್ಯಾಯನಿಯರಿಗೆ ೫ ಗಂಟೆ ಹಾಗೂ ಅದಕ್ಕಿಂತ ಹೆಚ್ಚು ವೇಳೆ ತರಗತಿ ನಡೆಸಿದರ ತಿಂಗಳಿಗೆ ೬೦-೦೦ ರೂ.ಗಳು

೪. ಎಸ್‌ಎಸ್‌ಎಲ್‌ಸಿ ಗಿಂತ ಕಡಿಮೆ ಧರ್ಜೆ ಇರುವ ಉಪಾಧ್ಯಾಯನಿಯರಿಗೆ ೫ ಗಂಟೆಗಿಂತ ಕಡಿಮೆ ವೇಳೆ ತರಗತಿ ನಡೆಸಿದರೆ ತಿಂಗಳಿಗೆ ೨೦-೦೦ ರೂ. ಕೊಡಲಾಗುವುದು.

ಈ) ಪ್ರಸ್ತಾವೆಯು ಸದ್ಯಕ್ಕಿಲ್ಲ.

ರಾಜ್ಯದಲ್ಲಿರುವ ಗ್ರಾಮಾಂತರ ಮತ್ತು ನಗರ ಪ್ರದೇಶಗಳ ಮಹಿಳಾ ಮಂಡಳಿಗಳ ಪಟ್ಟಿ.

ಕ್ರ. ಸಂ.	ಜಿಲ್ಲೆಗಳ ಹೆಸರು	ಗ್ರಾಮಾಂತರ		ನಗರ	
		ನೊಂದಣಿಯಾಗದ	ನೊಂದಣಿಯಾಗದೆ ಇರುವ	ನೊಂದಣಿಯಾದ	ನೊಂದಣಿಯಾಗಿರುವುದಂ
೧	ಬೆಂಗಳೂರು (ನ)	೭೪	೫೧	೧೨	೧೨೪
೨	ಬೆಂಗಳೂರು (ಗಾ)	೨೮೭	೩೮೬	—	—
೩	ತುಮಕೂರು	೩೭೪	೩೭	೨೩	—
೪	ಕೋಲಾರ	೨೪೪	೧೫೫	೨೫	—
೫	ಚಿತ್ರದುರ್ಗ	೩೫೦	೨೨೮	೨೫	
೬	ಶಿವಮೊಗ್ಗ	೩೨೧	೧೨೦	೩೩	೩೧
೭	ಮೈಸೂರು	೩೫೮	೧೦೧	೩೩	೨೯
೮	ಮಡಿಕೇರಿ	೨೬೫	—	೨೩	—
೯	ಮಂಗಳೂರು	೨೯೦	೧೮೯	೧೬	೭೨
೧೦	ಚಿಕ್ಕಮಗಳೂರು	೩೧೪	—	೧೬	—
೧೧	ಹಾಸನ	೪೫೮	೧೧೪	೨೭	—
೧೨	ಮಂಡ್ಯ	೧೪೬	೭೬	೪	—
೧೩	ಬಿಜಾಪುರ	೩೫೨	೧೭೨	೩೮	—
೧೪	ಬೆಳಗಾಂ	೨೯೯	೪೮	೧೯	೪
೧೫	ಬಳ್ಳಾರಿ	೨೦೮	೩೧	೨೨	—
೧೬	ಬೀದರ್	೪೮೮	೩೫	೨೩	—
೧೭	ಧಾರವಾಡ	೭೧೭	೨೭೭	—	—
೧೮	ಕಾರವಾರ	೩೮೨	—	೯	—
೧೯	ಗುಲ್ಬರ್ಗಾ	೨೦೫	೧೪೩	೨೫	—
೨೦	ರಾಯಚೂರು	೨೨೧	೧೨೦	೨೮೮	೧೨೮
	ಒಟ್ಟು	೬೩೨೮	೨೭೩೩	೫೮೫	೩೨೮

ತುಂಡು ಭೂಮಿ ನಿಷೇಧ ಕಾಯಿದೆ ರದ್ದು ಮಾಡಂವ ಬಗ್ಗೆ

೨೬೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆರ್ಥಿಕ ಸಂಪತ್ತೆಯಲ್ಲಿ ಸಣ್ಣ ಹಿಡುವಳಿಗಳು ಪೆಚ್ಚಾಗಿರುವ ರಾಜ್ಯದಲ್ಲಿ ಜಾರಿಯಲ್ಲಿರುವ ತುಂಡು ಭೂಮಿ ನಿಷೇಧ ಕಾಯಿದೆಯಿಂದ ತನ್ನ ಆಸ್ತಿಯನ್ನು ಮಾರುವ, ಕೊಳ್ಳುವ ಮಂತ್ರು ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲು, ಅವುಗಳ ಖಾತೆ ಮಾಡಿಸಿಕೊಳ್ಳಲು ಸಹ ರೈತರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಈ ಕಾಯಿದೆ ಪ್ರಜೆಗಳ ಮೂಲಭೂತ ಹಕ್ಕಾದ ಆಸ್ತಿಯನ್ನು ಆರ್ಜಿಸುವ, ಪರಭಾರೆ ಮಾಡುವ ಅಥವಾ ವರ್ಗಾವಣೆ ಮಾಡುವ ಮೂಲಭೂತ ಹಕ್ಕಿಗೆ ಚ್ಯುತ್ತಿಯಾಗುವುದಿಲ್ಲವೇ,

ಇ) ರಾಜ್ಯದಲ್ಲಿ ಜಾರಿಯಲ್ಲಿರುವ ಈ ತುಂಡು ಭೂಮಿ ನಿಷೇಧ ಕಾಯಿದೆಯನ್ನು ರದ್ದು ಮಾಡಿ ರೈತರಿಗೆ ಸಹಾಯ ಮಾಡುವ ಆಲೋಚನೆ ಸರ್ಕಾರದವರಲ್ಲಿದೆಯೇ ?